# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ನಿರ್ದೇಶಕರ ಕಛೇರಿ, ನಗರ ಯೋಜನೆ ಮಹದೇವಪುರ ವಲಯ, ಬೆಂಗಳೂರು-48

ಸಂಖ್ಯೆ:ಬಿಬಿಎಂಪಿ/ಮ.ವ./ನ.ಯೋ/ಪ್ರಾ.ಪ್ರ.ಪ-13/2013-14 ದಿನಾಂಕ: 16.12.2013

## 'ಪ್ರಾರಂಭಿಕ ಪ್ರಮಾಣ ಪತ್ರ'

ವಿಷಯ:- ಸಂಖ್ಯೆ:ಬಿಬಿಎಂಪಿ/ಮವ/ನಯೋ/ಕಮಿಟಿ/ಎಲ್.ಪಿ/13/2013-14 ದಿನಾಂಕ :17.04.2013 ರಂದು ಕಟ್ಟಡ ನಕ್ಷೆಗೆ ಪರವಾನಗಿ ಪಡೆದಿರುವ ವಸತಿ ಸಮುಚ್ಚಯ ಕಟ್ಟಡ ನಿರ್ಮಾಣವನ್ನು ಪ್ರಾರಂಭಿಸಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ:- ನಿಮ್ಮ ಮನವಿ ಪತ್ರದ ದಿನಾಂಕ:28.10.2013.

******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಹದೇವಪುರ ವಲಯದ ಕೈಕೊಂಡ್ರಹಳ್ಳಿ ಗ್ರಾಮದ ಖಾತಾ ನಂ. 1863/201/14 (ವಾರ್ಡ್ ನಂ.150) ರಲ್ಲಿ ದಿನಾಂಕ:15.11.2013 ರಂದು ಸ್ಥಳ ಪರಿಶೀಲನೆ ಮಾಡಲಾಗಿ ಸದರಿ ನಿವೇಶನದಲ್ಲಿ ಕಟ್ಟಡದ ಕೆಲಸ ಪ್ರಾರಂಭಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಹದೇವಪುರ ವಲಯ ಕಟ್ಟಡ ನಕ್ಷೆ ಮಂಜೂರಾತಿ ಸಂಖ್ಯೆ:ಬಿಬಿಎಂಪಿ/ಮವ/ನಯೋ/ಕಮಿಟಿ/ಎಲ್.ಪಿ/87/2013-14 ರಲ್ಲಿ ಪರವಾನಗಿ ನೀಡಿರುವ ಕಟ್ಟಡದ ನಕ್ಷೆಯಂತೆ Plinth beam ಕೆಲಸ ಹಾಗೂ ಆರ್.ಸಿ.ಸಿ ಕಂಬಗಳನ್ನು ನಡುಭಾಗಗಳ ಪ್ರಕಾರ ಹೋಲಿಕೆ ಮಾಡಲಾಗಿ ಈ ಕಟ್ಟಡದ ಕಾಮಗಾರಿ ಮಂಜೂರಾತಿ ನೀಡಿರುವ ನಕ್ಷೆಯಂತೆ ಬೈಲಾ ಪ್ರಕಾರ ಇರುವುದಾಗಿ ಕಂಡುಬಂದಿರುತ್ತದೆ. ಈ ಸಂಬಂಧ ಶುಲ್ಕ ರೂ. 285000.00 ಗಳನ್ನು ಡಿ.ಡಿ.ಸಂಖ್ಯೆ: 107711 ದಿನಾಂಕ: 11.12.2013 ನ್ನು ದಿನಾಂಕ: 16.12.2013 ರಂದು ಕಾರ್ಪೋರೇಷನ್ ಬ್ಯಾಂಕ್‌ನಲ್ಲಿ ಮಾನ್ಯ ಆಯುಕ್ತರ ಖಾತೆಗೆ ಜಮಾ ಮಾಡಲಾಗಿರುತ್ತದೆ.

ಆದ್ದರಿಂದ ಕೆಳಕಂಡ ಷರತ್ತುಗಳಿಗೊಳಪಟ್ಟು ಕಾಮಗಾರಿಯನ್ನು ಮುಂದುವರಿಸಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಒಪ್ಪಿರುವ ಮೇರೆಗೆ, ಈ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

1. ಯಾವುದೇ ಬದಲಾವಣೆಗಳನ್ನಾಗಲೀ, ಮಾರ್ಪಾಡುಗಳನ್ನಾಗಲೀ ಅಥವಾ ಉಲ್ಲಂಘನೆಗಳನ್ನಾಗಲೀ ಮಾಡದೇ ಕಟ್ಟುನಿಟ್ಟಾಗಿ ಮಂಜೂರಾತಿ ನೀಡಿರುವ ನಕ್ಷೆಯ ಮತ್ತು ಕಟ್ಟಡ ಉಪ-ವಿಧಿಗಳ ಪ್ರಕಾರವೇ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು.
2. ಕಾಮಗಾರಿಯು, ಅಡಿಪಾಯದ ಅಥವಾ ಸ್ತಂಭಗಳ ಆಧಾರ ಸ್ತಂಭಗಳ ಸ್ಥಿರೀಕರಣ ಕಾರ್ಯವು ಪೂರ್ಣಗೊಂಡಿದ್ದು ನಿರ್ಮಾಣವನ್ನು ಮಂಜೂರಾತಿ ನೀಡಿರುವ ನಕ್ಷೆಯ ಮತ್ತು ಕಟ್ಟಡ ಉಪ-ವಿಧಿಗಳ ಪ್ರಕಾರ ನಿರ್ಮಾಣ ಮಾಡಿ ಕಟ್ಟಡ ಪೂರ್ಣಗೊಂಡನಂತರ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂದೇಶವನ್ನು ಕಳುಹಿಸತಕ್ಕದ್ದು ಹಾಗೂ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯುವುದು.
3. ಕಾಲಕಾಲಕ್ಕೆ ಸಂಧರ್ಭಾನುಸಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನೀಡುವ ಸೂಚನೆಗಳನ್ನು ಪಾಲಿಸತಕ್ಕದ್ದು ಹಾಗೂ ಮಂಜೂರಾತಿ ಸಮಯದಲ್ಲಿ ನೀಡಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

16/12

ಸಹಾಯಕ ನಿರ್ದೇಶಕರು ನಗರ ಯೋಜನೆ
ಬಿಬಿಎಂಪಿ, ಮಹದೇವಪುರ
ಬೆಂಗಳೂರು.

ಕಛೇರಿ ಟಿಪ್ಪಣಿಯು
ಜಂಟಿ ಆಯುಕ್ತರು ರವರಿಂದ
ಅನುಮೋದಿಸಲ್ಪಟ್ಟಿದೆ.

ರವರಿಗೆ,

Sri Renukapoor GPA Holder
T R Ramachandra
No.11/18
Cambridge Road, Ulsoor
Bangalore-08

ಪ್ರತಿಯನ್ನು:

1. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಮಾರತ್‌ಹಳ್ಳಿ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.